ಮಾಡುವುದಾದರೂ ಏನಿದೆ?

ಕೌಂಟರಿಗೆ ಒಬ್ಬ ಬಂದ; ಆವನು ಈ ಮೊದಲು ಬಾಗಿಲ ಬಳಿ ನಿಂತು ಮಾತಾಡುತ್ತಿದ್ದವನೇ. ಅವನ ಮುಖದಲ್ಲಿ ನನ್ನನ್ನು ನೋಡಿ ಆಶ್ಚರ್ಯವಿತ್ತು. ನಡುರಾತ್ರಿ, ಒಂಟಿ ಹೆಂಗಸು, ಅದೂ ವಯಸ್ಸಾದವಳು. ಕೌಂಟರ್ ಬಿಟ್ಟು ನೇರವಾಗಿ ನನ್ನಲ್ಲಿಗೇ ಬಂದ.

'ಇಲ್ಲಿ ಒಂದು ದಿನಕ್ಕಾಗಿ ರೂಮು ಸಿಗಬಹುದೇ?'

ಅಲ್ಲಿ ಮಲಗಿದರೆ ನಿದ್ದೆ ಬರಬಹುದು ಎನ್ನುವ ಭರವಸೆಯಾಗಲೀ, ಅದು ಸುರಕ್ಷಿತ ಎನ್ನುವ ಧೈರ್ಯವಾಗಲೀ ಹುಟ್ಟಲಿಲ್ಲ. ಆದರೂ ಆ ರಾತ್ರಿ ಅಲ್ಲಿ ಮತ್ತೇನು ಕೇಳಬೇಕೆಂದು ತಿಳಿಯದೆ ಕೇಳಿದೆ.

'ಇಲ್ಲ ಮ್ಯಾಡಮ್, ಕ್ಷಮಿಸಿ. ಎಲ್ಲ ಕೋಣೆಗಳು ಭರ್ತಿಯಾಗಿವೆ. ಸಾಮಾನ್ಯವಾಗಿ ನಮ್ಮಲ್ಲಿ ಒಂದೆರಡಾದರೂ ರೂಮುಗಳಿರುತ್ತವೆ. ಆದರೆ ಈ ದಿನ ಕಾಡ್ಗಿಚ್ಚಿನಿಂದ ನಿರಾಶ್ರಿತರಾದವರು ಬಹಳಜನ ಬಂದಿರುವುದರಿಂದ ಎಲ್ಲವೂ ಭರ್ತಿಯಾಗಿವೆ. ಈ ವಾರವಿಡೀ ರೂಮು ಸಿಗೋದು ಕಷ್ಟ.'

ಅವನು ಇನ್ನೂ ನಾನು ಅವನ ಎದುರಿಗೆ ಇರುವುದು ಹೌದೋ ಅಲ್ಲವೋ ಎನ್ನುವ ರೀತಿಯಲ್ಲಿ ನೋಡುತ್ತಿದ್ದ.

'ತೊಂದರೆಯಿಲ್ಲ, ಇಲ್ಲೇ ಕುಳಿತಿರುತ್ತೇನೆ, ಬೆಳಗಾಗುವುದರಲ್ಲಿ ಕಾರು ಬರಬಹುದು' ಎಂದೆ.

'ಖಂಡಿತಾ. ಕಾಫಿ ಬೇಕಿದ್ದರೆ ಕೇಳಿ, ತಂದುಕೊಡುವೆ.' ಎಂದು ಹೇಳಿ, ಆಗಲೇ ಉರಿದು ತಣ್ಣಗಾಗಿದ್ದ ಫೈರ್ ಪ್ಲೇಸಿನಲ್ಲಿ ಬೆಂಕಿ ಹೊತ್ತಿಸಿದ. ಬೆಚ್ಚಗಾಗತೊಡಗಿತು. ಬೆಳಕು ಹರಿಯುವ ತನಕ ಅಲ್ಲಿಯೇ ಕುಳಿತು ಕೊಳ್ಳಬಹುದು ಎನ್ನುವ ಭರವಸೆಯೂ ಮೂಡತೊಡಗಿತು.

ಅಲ್ಲಿ ಕುಳಿತಿರುವಾಗಲೇ ಇನ್ನೊಬ್ಬ ಬಂದು, 'ನೀವು ಅನ್ಸೆಲ್ಮೋ ಕಡೆಯವರಲ್ವ, ಅದೇ... ವಸುಂಧರಾ.. ಟ್ರಾಂಕ್ವಿಲ್ ಮೀಡೋಸ್‌ನಿಂದ.'.

ಒಪ್ಪಿಕೊಳ್ಳಬೇಕೋ ಬೇಡವೋ ಎಂದು ತಕ್ಷಣ ನಿರ್ಧರಿಸಲಾಗಲಿಲ್ಲ. ಸುಮ್ಮನೇ ಉಳಿದೆ. ಅವನೇ ಮುಂದುವರೆಸಿದ.

'ಅವರದ್ದು ಮೂರು ರೂಮುಗಳಿವೆ, ಎರಡರಲ್ಲಿ ಆಗಲೇ ಜನ ಇದ್ದಾರೆ. ಅಲ್ಲಿ ಹೋಗಿ ವಿಶ್ರಮಿಸಿ. ಇಷ್ಟು ಹೊತ್ತಿನ ನಂತರ ಯಾರೂ ಬರಲಿಕ್ಕಿಲ್ಲ. ಬೆಳಗ್ಗೆ ಎದ್ದನಂತರ ವಿವರಗಳನ್ನು ಕೊಡುವಿರಂತೆ' ಎಂದು ರೆಸೆಪ್ಷನ್ನಿನಲ್ಲಿ ಕುಳಿತವನ ಕಡೆ ಸನ್ನೆ ಮಾಡಿದ.

'ನೋ, ಥ್ಯಾಂಕ್ಸ್' ಎಂದು ಅಲ್ಲಿಯೇ ಕುಳಿತೆ.

ಅವನಿಗೆ ಏನನಿಸಿತೋ. ಸುಮ್ಮನೆ ಹೋದ. ಹೇಗಾದರೂ ಮಾಡಿ ಬೆಳಕು ಮೂಡುವುದಕ್ಕೆ ಕಾಯಬೇಕು ಎಂದು ಧೈರ್ಯ ತಂದುಕೊಂಡು ಕುಳಿತೆ. ರೆಪ್ಪೆಗಳು ಭಾರವಾಗತೊಡಗಿದವು.

ರಾತ್ರಿಯ ನೀರವತೆಯನ್ನು ಸೀಳಿ ಫೋನು ಒಮ್ಮೆಲೆ ಗುಣುಗುಣಿಸಿದಾಗ ಬೆಚ್ಚಿದೆ. ಮೊಮ್ಮಗನಿಂದ. ಅವನಿದ್ದ ಊರಲ್ಲಿ ಆಗಲೇ ಬೆಳಗಿನ ಆರು ಗಂಟೆ.

'ಅಜ್ಜಿ, ಎಲ್ಲಿದ್ದೀರಿ? ಸೇಫ್ ಆಗಿದ್ದೀರಿ ತಾನೆ?'

'ನಾನು ಹೆವನ್ಲಿ ಲಾಡ್ಜಿಂಗಲ್ಲಿ ಇದ್ದೀನಿ. ಬೆಳಗಾಗುತ್ತಲೇ ಮನೆ ತಲುಪುತ್ತೇನೆ.'

'ಮತ್ತೆ.. ಹೋಟೆಲ್ಲಿಗೆ ನೀವು ಇನ್ನೂ ಬಂದಿಲ್ಲ ಅಂದ್ರು. ಈಗಷ್ಟೇ ಬಂದ್ರಾ? ಅನ್ಸೆಲ್ಮೋನಿಂದಲೂ ಫೋನಿಲ್ಲ.'

'ಹೂಂ, ಆದರೆ ಇವೆಲ್ಲಾ ನಿನಗೆ ಹೇಗೆ ಗೊತ್ತು?'

'ನನಗೆ ಎಲ್ಲಾ ಗೊತ್ತು. ಕ್ಯಾಲಿಫೋರ್ನಿಯಾದ ಸಹವಾಸವೇ ಬೇಡ, ನಮ್ಮ ರಾಜ್ಯಕ್ಕೆ ಬಂದುಬಿಡಿ ಅಜ್ಜಿ. ಇಲ್ಲಿ ಅಲ್ಲಿಗಿಂತ ಒಳ್ಳೆಯ ವೃದ್ಧಾಶ್ರಮಗಳಿವೆ. ಹೆಚ್ಚು ಚೂಟಿ ವೃದ್ಧರೂ ಸಹ.'

ಲಘುಹಾಸ್ಯದ ಮೆಸೇಜ್ ಆಗಿದ್ದರೂ ಅವನು ಹೆದರಿದ್ದ ಎಂದು ನನಗೆ ಬಿಡಿಸಿಹೇಳಬೇಕಿರಲಿಲ್ಲ.

'ಅವೆಲ್ಲಾ ಕಡೆಗೆ, ಇದು ನಿನಗೆ ಹೇಗೆ ಗೊತ್ತು?'

'ಜಗತ್ತು ಸಣ್ಣದು. ಅನ್ಸೆಲ್ಮೋನನ್ನು ನಾನೇ ಕಳುಹಿಸಿದೆ. ಅವನಿಗೆ ಹಣ ಬೇಕಿತ್ತು, ನನಗೆ ಅಜ್ಜಿಯ ಸೇಫ್ಟಿ. ಆದರೆ ನೀವ್ಯಾಕೆ ಕಾರಿನಿಂದ ತಪ್ಪಿಸಿಕೊಂಡಿರಿ?'

ಅವನ ಪ್ರಶ್ನೆಯನ್ನು ಉತ್ತರಿಸುವ ಗೋಜಿಗೇ ಹೋಗಲಿಲ್ಲ. ಒಮ್ಮೆಲೆ ಹುಟ್ಟಿದ ಸಂಶಯಗಳನ್ನು ಈಗ ವಿವರಿಸುವುದು ಹೇಗೆ?

'ಅವನಿಗೆ ಎಷ್ಟು ಕೊಟ್ಟೆಯೋ?'

'ಅವೆಲ್ಲಾ ಕಡೆಗೆ.'

'ಇರಲಿ, ಅವನಿಗೆ ಥ್ಯಾಂಕ್ಸ್ ಹೇಳಿಬಿಡು' ಎಂದೆ. ಮರುಕ್ಷಣದಲ್ಲಿ, 'ಬೇಡ, ಅವನ ನಂಬರ್ ಕಳುಹಿಸು. ನಾನೇ ಹೇಳುತ್ತೇನೆ.' ಎಂದು ಸೇರಿಸಿದೆ.

ಕೌಂಟರಿನಲ್ಲಿ ಕೂತವ ಮತ್ತೆ ನನ್ನ ಮುಂದೆ ಬಂದು ನಿಂತಿದ್ದ. ರೂಮಿಗೆ ಹೋಗಲು ಎದ್ದು ನಿಂತಾಗ ನನ್ನ ಬಗ್ಗೆ ಹೆಮ್ಮೆಯೂ, ನಾಚಿಕೆಯೂ ಒಟ್ಟಿಗೇ ಆದವು. ●